OS.140/2016 DW-2

**ದಿನಾಂಕಃ 08-06-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ.ವಿ.ಎಸ್.ಆರ್. ವಕೀಲರಿಂದಃ</u>**

ನಿಪಿ-2 ರ ಕರಾರು ಪತ್ರದ 2 ನೇ ಪುಟದಲ್ಲಿರುವ ಭಾವಚಿತ್ರ ನನ್ನ ತಂದೆಯದಾಗಿರುತ್ತದೆ ಆದರೆ ಹೆಬ್ಬೆಟ್ಟು ಗೊತ್ತಿಲ್ಲ. ದಾವಾ ಸ್ವತ್ತಿನ ಸ.ನಂ. ಗೊತ್ತಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ವಾದಿಗೆ ಕ್ರಯದ ಕರಾರು ಬರೆದುಕೊಟ್ಟಿರುವ ಬಗ್ಗೆ ಗೊತ್ತಿಲ್ಲ. ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮಕ್ಕಳೆಲ್ಲಾರು ಸೇರಿ ಸಂಪಾದನೆ ಮಾಡಿರುತ್ತೇವೆ. ದಾವಾ ಸ್ವತ್ತನ್ನು ಬಸವಯ್ಯ ಎಂಬುವವರಿಂದ ನಾವುಗಳು ಮತ್ತು ತಂದೆ ಜಂಟಿಯಾಗಿ 1996 ರಲ್ಲಿ ಖರೀದಿ ಮಾಡಿರುತ್ತೇವೆ, ಆದರೆ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಕನ್ನಮ್ಮ ಎಂಬುವವರಿಂದ ದಿಃ24.05.2000 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ.2 ರ ಕರಾರು ಪತ್ರದಂತೆ ರೂ.5 ಲಕ್ಷ ಡಿಡಿ. ಮೂಲಕ ನನ್ನ ತಂದೆಗೆ ಕೊಟ್ಟಿರುವುದು ಗೊತ್ತಿಲ್ಲ. ನನ್ನ ತಂದೆ ದಾವಾ ಸ್ವತ್ತನ್ನು ಕುಟುಂಬದ ಹಣದ ಅವಶ್ಯಕತೆಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತವಾಗಿರುವುದರಿಂದ ನಮಗೆ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಆಗದೇ ಇರುವುದರಿಂದ ಸುಳ್ಳು ತಕರಾರು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ 2014 ರಲ್ಲಿ ರೂ.6 ಲಕ್ಷ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.